**ಓ ಎಸ್ ನಂಃ 628/2014**
**ಡಿ ಡಬ್ಲ್ಯೂ ಃ 2**

**ದಿಃ 07.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಹೆಚ್ ಸಿ ಆರ್ ವಕೀಲರಿಂದಃ-**

ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ಈ ದಾವೆಯ ವಾದಿ ಮತ್ತು ಪ್ರತಿವಾದಿಗಳು ತಮಗೆ ಗೊತ್ತು ಎಂದರೆ ಸಾಕ್ಷಿಯು ಪ್ರತಿವಾದಿಗಳು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಮುನಿಯಪ್ಪನ ಕುಟುಂಬದ ಬಗ್ಗೆ ನನಗೆ ಗೊತ್ತು. ಮಂಗಮ್ಮ ಮುನಿಯಪ್ಪನ ಮಗಳು ಎಂದರೆ ಸರಿ. ದಾವಾ ಸ್ವತ್ತುಗಳು ವಾದಿಯ ತಾಯಿ ಮಂಗಮ್ಮ ಮತ್ತು ಆಕೆಯ ಸಹೋದರರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಮುನಿಯಪ್ಪನಿಗೆ ದಾವಾ ಆಸ್ತಿಗಳು ಹೇಗೆ ಬಂದವು ಎಂಬುದು ತಮಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರ ಸ್ವತ್ತನ್ನು ಮುನಿಯಪ್ಪನವರು ಕ್ರಯಕ್ಕೆ ಪಡೆದಿರುತ್ತಾರೆ. ತಾವೇನಾದರೂ ಸದರಿ ಕ್ರಯ ಪತ್ರವನ್ನು ನೋಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮುನಿಯಪ್ಪನವರ ಸಹೋದರರ ನಡುವೆ ನ್ಯಾಯಾಲಯದಲ್ಲಿ ದಾವೆಗಳು ಇತ್ಯರ್ಥವಾಗಿದ್ದು ದಾವಾ ಸ್ವತ್ತುಗಳು ಮುನಿಯಪ್ಪನ ಭಾಗಕ್ಕೆ ಬಂದಂತಹ ಸ್ವತ್ತುಗಳು ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪನವರು ತಮ್ಮ ಸಂಬಂಧಿಕರು ಎಂದರೆ ಸರಿಯಲ್ಲ, ಆದರೆ ಅವರು ನನ್ನ ಗ್ರಾಮದ ವಾಸಿ. ಮುನಿಯಪ್ಪ ಮತ್ತು ಆತನ ಮಕ್ಕಳು ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಮುನಿಯಪ್ಪನವರು ಸುಮಾರು 20-25 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಮುನಿಯಪ್ಪನವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಮುನಿಯಪ್ಪನಿಗೆ ಬೈಚಗುಪ್ಪೆ ಗ್ರಾಮದ ಸರ್ವೆ ನಂ. 33 ರಲ್ಲಿ 1 ಎಕರೆ 4 ಗುಂಟೆ, ಸರ್ವೆ ನಂ. 54 ರಲ್ಲಿ 4 ಗುಂಟೆ ಜಮೀನು, ಇನ್ನೊಂದು ಸರ್ವೆ ನಂ. ನಲ್ಲಿ 30 ಗುಂಟೆ ಇದ್ದು ಸದರಿ ಸರ್ವೆ ನಂ. ನನಗೆ ಈಗ ನೆನಪಿಲ್ಲ, ಸದರಿ ಸ್ವತ್ತುಗಳು ಮುನಿಯಪ್ಪನಿಗೆ ದಾನ ಪತ್ರದ ಮೂಲಕ ಬಂದಿದ್ದು. ಸದರಿ ದಾನ ಪತ್ರವನ್ನು ತಾವೇನಾದರೂ ನೋಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮರಣ ಶಾಸನ ಪತ್ರದ ಬಗ್ಗೆ ಹೇಳಿದ್ದೀರಿ ಸದರಿ ಮರಣ ಶಾಸನ ಪತ್ರವನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಮುನಿಯಪ್ಪನವರು ಆತನ ಗಂಡು ಮಕ್ಕಳ ಹೆಸರಿಗೆ ಬರೆದಿರುತ್ತಾರೆ. ತಾವೇನಾದರೂ ಸದರಿ ಮರಣ ಶಾಸನ ಪತ್ರವನ್ನು

**ಓ ಎಸ್ ನಂಃ 628/2014**
**ಡಿ ಡಬ್ಲ್ಯೂ ಃ 2**

ನೋಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಅಕ್ಕ ಪಕ್ಕದಲ್ಲಿ ತಮಗೆ ಸೇರಿದ ಯಾವುದೆ ಜಮೀನು ಇಲ್ಲ ಎಂದರೆ ಸಾಕ್ಷಿಯು ಸ್ವಲ್ಪ ದೂರದಲ್ಲಿ ನಮ್ಮ ಮನೆ ಇದೆ ಎಂದು ನುಡಿಯುತ್ತಾರೆ. ತಾವು ಜನಿಸುವುದಕ್ಕಿಂತ ಮೊದಲೇ ಮಂಗಮ್ಮನವರ ಮದುವೆ ಆಗಿತ್ತು ಎಂದರೆ ಸರಿ. ಮರಣ ಶಾಸನ ಪತ್ರವನ್ನು ಮುನಿಯಪ್ಪನವರು ಯಾವಾಗ ಬರೆದಿದ್ದಾರೆ ಎಂದರೆ ಸಾಕ್ಷಿಯು ಈಗ ದಿನಾಂಕ ನೆನಪಿಲ್ಲ. ಲಕ್ಕಮ್ಮರವರು ಮುನಿಯಪ್ಪನನ್ನು ಸಾಕಿಕೊಂಡಿರುತ್ತಾರೆ. ದಾವಾ ಸ್ವತ್ತುಗಳು ಮುನಿಯಪ್ಪನವರ ಮಕ್ಕಳ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**